# *Press Clipping*

The Resource Centre

**Publication** : **Vijayavani**

**Date** : **June 10, 2016**

**Edition** : **State**

**Page** : **3, Cinevani**

---



## ಬಿಡುಗಡೆಗೆ ಹತ್ತಿರ ಹಾಡುಗಳು ನಿರುತ್ತರ

ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ಪುತ್ರ ಅಪೂರ್ವ ಕಾಸರವಳ್ಳಿ ನಿರ್ದೇಶನದ ಚೊಚ್ಚಲ ಚಿತ್ರ 'ನಿರುತ್ತರ'. ಇದಕ್ಕೆ ನಟಿ ಭಾವನಾ ಬಂಡವಾಳ ಹಾಕಿರುವುದಲ್ಲದೆ ಪ್ರಮುಖ ಪಾತ್ರದಲ್ಲೂ ನಟಿಸಿದ್ದಾರೆ. ಅವರಿಗೆ ಬಾಲಿವುಡ್ ನಟ ರಾಹುಲ್ ಬೋಸ್ ಜೋಡಿ. ಉಳಿದಂತೆ ಕಿರಣ್ ಶ್ರೀನಿವಾಸ್, ಐಂದ್ರಿತಾ ರೇ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಗೆಳೆತನ, ಪ್ರೀತಿ, ಸಂಬಂಧಗಳ ಸುತ್ತ ಸುತ್ತುವ ಈ ಕಥೆಗೆ ಹೆಸರಾಂತ ಆಲ್ಬಂ ಸಂಗೀತಗಾರ ನೀಲಾದ್ರಿ ಕುಮಾರ್ ಮ್ಯೂಸಿಕ್ ನೀಡಿದ್ದಾರೆ. ಇದು ಅವರ ಮೊದಲ ಸಿನಿಮಾ ಎಂಬುದೇ ವಿಶೇಷ. ಚಿತ್ರದಲ್ಲಿ ಒಟ್ಟು 7 ಹಾಡುಗಳಿದ್ದು, ಕವಿರಾಜ್ ಸಾಹಿತ್ಯ ಬರೆದಿದ್ದಾರೆ. ಇತ್ತೀಚೆಗೆ 'ನಿರುತ್ತರ' ಆಡಿಯೋ ಲಾಂಚ್ ಮಾಡಲಾಯಿತು. ಸಾಮಾನ್ಯವಾಗಿ ಆಡಿಯೋ ಲಾಂಚ್ ಎಂದ ಮೇಲೆ ಸಿನಿಮಾ ತಂಡದವರು, ಚಿತ್ರ ಹಾಗೂ ಹಾಡುಗಳ ಕುರಿತು ಮಾಹಿತಿ ಹಂಚಿಕೊಳ್ಳುತ್ತಾರೆ. ಆದರೆ 'ನಿರುತ್ತರ' ಧ್ವನಿಸಾಂದ್ರಿಕೆ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿ 'ರೆಬೆಲ್ ಸ್ಟಾರ್' ಅಂಬರೀಷ್ ಅವರನ್ನು ಬಿಟ್ಟರೆ ಚಿತ್ರತಂಡದವರಾರೂ ಮಾತನಾಡಲಿಲ್ಲ. ಜತೆಗೆ ಇದೇ ಸಮಯದಲ್ಲಿ ಚಿತ್ರದ ಟ್ರೇಲರ್ ಲಾಂಚ್ ಮಾಡಲಾಯಿತು. ನಂತರ ಮಾತನಾಡಿದ ಅಂಬರೀಶ್, 'ಒಬ್ಬ ಮಹಿಳೆಯಾಗಿ ಭಾವನಾ ಒಂದು ಒಳ್ಳೆಯ ಸಿನಿಮಾ ನಿರ್ಮಿಸಿದ್ದಾರೆ. ಅವರಿಗೆ ಯಶಸ್ಸು ದೊರೆಯಲಿ' ಎಂದು ಶುಭಹಾರೈಸಿದರು. ನಟರಾದ ದರ್ಶನ್, ಆದಿತ್ಯ, ಅನಿರುದ್ಧ್, 'ಲೂಸ್ ಮಾದ' ಯೋಗಿ ಸೇರಿದಂತೆ ಇನ್ನು ಹಲವು ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

Vijayavani;
Jun 10, 2016 Page No : 23